

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಇರುಳ ವಿರುದ್ಧ ಬೆಳಕಿನ ಯುದ್ಧ!

ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಇವು ಪ್ರಜಾಪ್ರಭುತ್ವವೆಂಬ ಸೌಧದ ಮೂರು ಬಲವಾದ ಸ್ತಂಭಗಳೆಂದು ಪರಿಭಾವಿಸಲಾಗಿದೆ. ಆದರೆ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿ ಹೇಳುವುದಾದರೆ ಈ ಕಂಬಗಳು ದುರ್ಬಲವಾಗಿ ಒಂದೊಂದೇ ಕಳಚಿಬೀಳತೊಡಗಿವೆ. ಯಾವಾಗ ಯಾರ ತಲೆಯ ಮೇಲೆ ಹೇಗೆ ಬೀಳುತ್ತವೆಯೋ ಎಂಬ ಆತಂಕ ನಿರ್ಮಾಣವಾಗಿದೆ. ಅವುಗಳನ್ನು ಎತ್ತಿಹಿಡಿದು ನಿಲ್ಲಿಸಬೇಕಾದ ಕೈಗಳು ಸದೃಢವಾಗಿಲ್ಲ. ಆ ಕೈಗಳನ್ನು ಸದೃಢಗೊಳಿಸುವ ಸಾಮರ್ಥ್ಯವಿರುವ ಪತ್ರಿಕಾರಂಗ ಮತ್ತು ಮಾಧ್ಯಮಗಳು ಅಡ್ಡದಾರಿಯನ್ನು ಹಿಡಿದಿವೆ. ಆಡಳಿತ ನಡೆಸುವವರ ತಲೆಯ ಮೇಲೆ ಸದಾ ತೂಗುಗತ್ತಿ ನೇತಾಡುತ್ತಿರುತ್ತದೆ (Uneasiness lies in the head that wears crown) ಎನ್ನುವ ಮಾತು ತೀರಾ ಹಳೆಯದಾಯಿತು. ಅವರ ಕೈಯಲ್ಲಿರುವ ಅಧಿಕಾರವೇ ಅವರಿಗೆ ರಕ್ಷಣೆಯನ್ನು ನೀಡುವ ಶಿರಸ್ತ್ರಾಣವಾಗಿದೆ (helmet). ಅವರನ್ನು ಅಧಿಕಾರಕ್ಕೆ ತಂದ ಜನರೇ 'ತಲೆದಂಡ' ತೆರಬೇಕಾದ ವಿಲಕ್ಷಣ ಪರಿಸ್ಥಿತಿ ಉಂಟಾಗಿದೆ. ಇದರ ಪರಿಣಾಮ ಏನೆಂದು ಯಾರೂ ಊಹಿಸಬೇಕಾಗಿಲ್ಲ. ನಿತ್ಯವೂ ಹಿಂಸೆ, ಕ್ರೌರ್ಯ, ಆತಂಕ ಮತ್ತು ಭಯದ ವಾತಾವರಣದಲ್ಲಿ ನಾಡಿನ ಜನತೆ ಬದುಕುತ್ತಿದ್ದು ಯಾರೂ ಏನೂ ಮಾಡಲು ಸಾಧ್ಯವಿಲ್ಲವೆಂಬಂತಾಗಿದೆ. ಇದಕ್ಕೆಲ್ಲಾ ಕಾರಣ ಕ್ರಿಯಾಶೀಲ ಪ್ರಜ್ಞಾವಂತ ನಾಗರಿಕರ ಅಭಾವ ಮತ್ತು ಅಸಂಘಟನೆ.

ಭ್ರಷ್ಟಾಚಾರವೆಂಬುದು ಪ್ರಜಾಪ್ರಭುತ್ವದ ಒಂದು ಅವಿಚ್ಛಿನ್ನ (inseparable) ಭಾಗವಾಗಿ ಪರಿಣಮಿಸಿದೆ. ಇದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆಯೇ ಹೊರತು ಸದ್ಯಕ್ಕೆ ಕಡಿಮೆಯಾಗುವ ಲಕ್ಷಣಗಳೇನೂ ಕಾಣಿಸುತ್ತಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನಬೆಂಬಲದಿಂದ ಅಧಿಕಾರಕ್ಕೆ ಬಂದ ಇದುವರೆಗಿನ ಯಾವುದೇ ಸರಕಾರ ಭ್ರಷ್ಟಾಚಾರದ ಆರೋಪದಿಂದ ಹೊರತಾಗಿಲ್ಲ. ಆರಂಭದಲ್ಲಿ ಜನಮನ್ನಣೆಯನ್ನು ಗಳಿಸಿದರೂ ಕ್ರಮೇಣ ಭ್ರಮನಿರಸನಗೊಳ್ಳುವಂತಾಗಿದೆ. ಮತದಾರರು ಪ್ರತಿ ಚುನಾವಣೆಯಲ್ಲಿಯೂ ಒಂದು ಸರಕಾರವನ್ನು ಕಿತ್ತು ಮತ್ತೊಂದು ಸರಕಾರವನ್ನು ಅಧಿಕಾರಕ್ಕೆ ತರುತ್ತಲೇ ಇದ್ದಾರೆ. ಆದರೂ ಆಡಳಿತಾರೂಢ ಸರಕಾರ ಹಿಂದಿನ ಸರಕಾರಕ್ಕಿಂತ ಹೆಚ್ಚು ಭ್ರಷ್ಟವಾಗಿ ಕಾಣುತ್ತದೆ. ಅದೇ ಸರಕಾರ ಮುಂದೊಂದು ದಿನ ಬೇರೊಂದು ಸರಕಾರ ಬಂದಾಗ ಕಡಿಮೆ ಭ್ರಷ್ಟವಾಗಿ ಕಾಣಿಸುತ್ತದೆ. ಇದು ಪ್ರಜಾಪ್ರಭುತ್ವದಲ್ಲಿ ಕಂಡುಬರುತ್ತಿರುವ ವಿರೋಧಾಭಾಸ. ಭ್ರಷ್ಟಾಚಾರದ 'ಬೆಳವಣಿಗೆ'ಯ ಒಂದು ವಾರೆ ನೋಟ! ಇಂದಿನ ಕೊಳಕು ರಾಜಕಾರಣದಲ್ಲಿ ಭ್ರಷ್ಟಾಚಾರದ ವಿರುದ್ಧ ಮಾತನಾಡಲು ಯಾರಿಗೂ ನೈತಿಕ ಹಕ್ಕು ಇಲ್ಲ. ಆಡಳಿತಪಕ್ಷದಲ್ಲಿರಲಿ, ವಿರೋಧಪಕ್ಷದಲ್ಲಿರಲಿ ಎಲ್ಲರ ಕೈಗಳೂ ಒಂದಲ್ಲ ಒಂದು ರೀತಿಯಲ್ಲಿ ಮಲಿನಗೊಂಡಿವೆ. ವ್ಯಭಿಚಾರದ ಆರೋಪ ಹೊತ್ತ ಮಹಿಳೆಯನ್ನು ಕಲ್ಲು ಹೊಡೆದು ಸಾಯಿಸಲು ಮುಂದಾದ ಜನರನ್ನು ಕಂಡು ಮರುಗಿ "Let him who is without sin, cast the first stone" ಎಂದು ಸವಾಲು ಹಾಕಿದ 'ಏಸುಕ್ರಿಸ್ತ' ಈಗ ಯಾರಿದ್ದಾರೆ? ಚುನಾವಣೆಯ ಸಂದರ್ಭದಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಡೆಗಟ್ಟಲು ಕಾರ್ಯಾಂಗಕ್ಕೆ ಶಾಸನಬದ್ಧ ಅಧಿಕಾರವಿದೆಯೆಂದು ಯಾರಿಗೂ ಗೊತ್ತಿರಲಿಲ್ಲ. ಅದನ್ನು ಮೊಟ್ಟಮೊದಲು ತೋರಿಸಿಕೊಟ್ಟವರೆಂದರೆ ಈ ಹಿಂದೆ ಮುಖ್ಯಚುನಾವಣಾಧಿಕಾರಿಯಾಗಿದ್ದ ಟಿ.ಎನ್. ಶೇಷನ್. ಮದಿಸಿದ ಆನೆಯಂತಿದ್ದ ರಾಜಕಾರಣಿಗಳನ್ನು ನೀತಿಸಂಹಿತೆಯ ಅಂಕುಶದಿಂದ ತಿವಿದು ಅವರು ಬಹುಮಟ್ಟಿಗೆ ಯಶಸ್ವಿಯಾದರು. ಆದರೆ ನಿವೃತ್ತರಾದ ಮೇಲೆ ಸ್ವತಃ ಆನೆಯಾಗಲು ಹೋಗಿ ಮತದಾರರ ಅಂಕುಶದಿಂದ ಘಾಸಿಗೊಂಡು ಮತ್ತೆಂದೂ ಮೇಲೇಳದಂತೆ ಇತಿಹಾಸದ ಪುಟ ಸೇರಿದರು.

ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿದ್ದ ಹಿಂದಿನ ಲೋಕಾಯುಕ್ತ ನ್ಯಾ. ವೆಂಕಟಾಚಲ ಅವರು ಹೋದಮೇಲೆ ಅಂಥವರು ಮತ್ತೆ ಬರುತ್ತಾರೆಯೇ ಎಂಬ ಅನುಮಾನವಿತ್ತು. ಅವರ ನಂತರ ಬಂದ ಸೌಮ್ಯ ಸ್ವಭಾವದ ಆದರೆ ದೃಢ ನಿಲುವಿನ ಇಂದಿನ ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಗಡೆಯವರು ಆರಂಭದಲ್ಲಿ ಅಂತಹ ಅನುಮಾನಗಳಿಗೆ ಎಡೆಮಾಡಿಕೊಟ್ಟರೂ ಕ್ರಮೇಣ ತಮ್ಮ ಕಾರ್ಯವೈಖರಿಯಿಂದ ಜನಮಾನಸದಲ್ಲಿ ವಿಶಿಷ್ಟವಾದ ಛಾಪು ಮೂಡಿಸಿದರು. ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವಾದರು. ಇತ್ತೀಚೆಗೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಬಂದ ಜನರ ಪ್ರತಿಕ್ರಿಯೆ ಅದಕ್ಕೆ ಸಾಕ್ಷಿ. ಎರಡು ವಾರಗಳ ಹಿಂದೆ ಯುವ ಅಂಕಣಕಾರರಾದ ಪ್ರತಾಪ ಸಿಂಹ ಅವರು "ಸಮಾಜವೇಕೆ ಕುಪಿತಗೊಂಡಿಲ್ಲ, ಎದ್ದು ಪ್ರತಿಭಟಿಸುತ್ತಿಲ್ಲ?" ಎಂದು ಸಮಾಜದ ಜಡತ್ವವನ್ನು, ಅಸಂಘಟನೆಯನ್ನು ಬೆತ್ತಲೆಗೊಳಿಸಿದ್ದಾರೆ. ಅದಕ್ಕೆ ಕಾರಣ ಸುಸ್ಪಷ್ಟ. ರಾಜಕೀಯ ಕಾರಣಗಳಿಗೆ, ಆರ್ಥಿಕ ಕಾರಣಗಳಿಗೆ, ಜಾತಿಮತಗಳ ಕಾರಣಗಳಿಗೆ ಆಯಾಯ ರಾಜಕೀಯ ಪಕ್ಷಗಳು, ಆಯಾಯ ಜಾತಿಯ ಜನರು ಸಂಘಟಿತರಾಗಿ ಹೋರಾಟ ಮಾಡಿದಂತೆ ಜೀವನದ ಮೌಲ್ಯಗಳನ್ನು ಎತ್ತಿಹಿಡಿಯಲು ಯಾರೂ ಮುಂದಾಗುವುದಿಲ್ಲ. ನಿನ್ನೆ ಮೊನ್ನೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯನ್ನು ಪ್ರತಿಭಟಿಸಿ 'ಭಾರತ ಬಂದ್' ಆಚರಿಸಿದಂತೆ ನ್ಯಾ. ಹೆಗ್ಗಡೆಯವರ ರಾಜೀನಾಮೆ ವಿರೋಧಿಸಿ ಯಾರೂ 'ಕರ್ನಾಟಕ ಬಂದ್' ಕರೆ ಕೊಡಲಿಲ್ಲ. ಏಕೆಂದರೆ ಜೀವನ ಮೌಲ್ಯಗಳು ನಮ್ಮ ಜನರ ಬದುಕಿನ ಜೀವನಾಡಿಯಾಗಿಲ್ಲ.

ಇಂದು ಸಮಾಜದಲ್ಲಿ ಭ್ರಷ್ಟಾಚಾರವೆಂಬ ಶಬ್ದ ಬಹಳ ಸೀಮಿತ ಅರ್ಥದಲ್ಲಿ ಬಳಕೆಯಾಗುತ್ತಿದೆ. ಅಧಿಕಾರದಲ್ಲಿದ್ದು ಅಕ್ರಮವಾಗಿ ಸಂಪತ್ತನ್ನು ಸಂಗ್ರಹಿಸಿದ ಸರ್ಕಾರಿ ಹುದ್ದೆಗಳಲ್ಲಿರುವ ಅಧಿಕಾರಿಗಳ ಮತ್ತು ರಾಜಕೀಯ ನೇತಾರರ ಭ್ರಷ್ಟ ನಡವಳಿಕೆಯನ್ನು ಕುರಿತಂತೆ ಮಾತ್ರ ಈ ಶಬ್ದ ಪ್ರಯೋಗದಲ್ಲಿದೆ. ಆದರೆ 'ಭ್ರಷ್ಟಾಚಾರ' ಎಂಬ ಪದದ ಮೂಲ ಶಾಬ್ದಿಕ ಅರ್ಥದ ಹರವು ವಿಸ್ತೃತವಾದುದು. ಯಾವುದೇ ಧರ್ಮಬಾಹಿರವಾದ, ನೀತಿಬಾಹಿರವಾದ ನಡವಳಿಕೆ ಯಾರಿಂದಲೇ ಘಟಿಸಲಿ ಅದು ಭ್ರಷ್ಟಾಚಾರವೆನಿಸುತ್ತದೆ. ಅಂತಹ ಅಡ್ಡದಾರಿಯನ್ನು ತುಳಿಯದೆ "ಆಚಾರಕ್ಕೆ ಅರಸಾಗು, ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು" ಎಂದು ಆಶಿಸಿದರು ನಮ್ಮ ಜನಪದರು.

**ಆಚಾರವಿಲ್ಲದ ನಾಲಿಗೆ ನಿನ್ನ**
**ನೀಚ ಬುದ್ಧಿಯು ಬಿಡು ನಾಲಿಗೆ**
**ವಿಚಾರವಿಲ್ಲದೆ ಪರರ ದೂಷಿಪುದಕ್ಕೆ**
**ಚಾಚಿಕೊಂಡಿರುವಂಥ ನಾಲಿಗೆ**

ಎಂದು ನಾಲಗೆಯ ನಂಜನ್ನು ಕಳೆದು ಹರಿಯ ಸ್ಮರಣೆ ಮಾಡುವಂತೆ ಹಾಡಿ ಹರಸಿದರು ದಾಸವರೇಣ್ಯರಾದ ಪುರಂದರದಾಸರು. 'ನುಡಿದಂತೆ ನಡೆ ಇದೇ ಜನ್ಮ ಕಡೆ' ಎಂದು ಜೀವನದ ಸರಿ ದಾರಿಯನ್ನು ತೋರಿಸಿದರು ಬಸವಾದಿ ಶಿವಶರಣರು. ಅಂತಹ ದಾರಿಯನ್ನು ತುಳಿಯಲು ಇರುವ ಅಡ್ಡಿ ಆತಂಕಗಳೇನೆಂಬುದನ್ನು ವಿವರಿಸುವ ಹಿತೋಪದೇಶದ ನುಡಿ ಹೀಗಿದೆ:

**ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ ।**
**ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ ॥**

ಇದರ ಅರ್ಥ: ಯೌವನ, ಹಣ, ಅಧಿಕಾರ ಮತ್ತು ಅವಿವೇಕತನ ಇವುಗಳಲ್ಲಿ ಒಂದೊಂದೂ ಅನರ್ಥಕ್ಕೆ ಕಾರಣವಾಗುತ್ತದೆ. ಇನ್ನು ಇವು ನಾಲ್ಕೂ ಒಟ್ಟಿಗೆ ಒಬ್ಬ ವ್ಯಕ್ತಿಯಲ್ಲಿಯೇ ಇದ್ದರೆ ಏನು ಗತಿ? ಈ ಸಂಸ್ಕೃತ ಸೂಕ್ತಿಯ ಆಶಯಕ್ಕೆ ಅನುಗುಣವಾದ ಒಂದು ಅಪರೂಪದ ಪ್ರಸಂಗ ಕ್ರಿ.ಶ. 7ನೆಯ ಶತಮಾನದ ಮಹಾಕವಿ ಬಾಣಭಟ್ಟನ 'ಕಾದಂಬರೀ' ಎಂಬ ಗ್ರಂಥದಲ್ಲಿ ಬರುತ್ತದೆ. ಸಂಸ್ಕೃತದ ಈ 'ಕಾದಂಬರೀ' ಕನ್ನಡದ ಕಾದಂಬರಿಯಲ್ಲ. 'ಕಾದಂಬರೀ' ಎಂಬ ಹೆಸರಿನ ಗಂಧರ್ವಕನ್ನಿಕೆ. ಬಾಣನ 'ಕಾದಂಬರೀ' ಗ್ರಂಥದ ಕಥಾನಾಯಕಿ. ಉಜ್ಜಯಿನೀ ಪಟ್ಟಣದ ಅರಸನಾದ ತಾರಾಪೀಡನ ಮಗ ಚಂದ್ರಾಪೀಡನ ಪತ್ನಿ. ಇಂಗ್ಲೀಷಿನ "Novel, Novelist" ಎಂಬ ಪದಗಳಿಗೆ ಕನ್ನಡದಲ್ಲಿ "ಕಾದಂಬರಿ, ಕಾದಂಬರಿಕಾರ/ರ್ತಿ" ಎಂಬ ಹೆಸರು ಬಂದದ್ದು ಬಾಣನ ಈ 'ಕಾದಂಬರೀ' ಎಂಬ ಗ್ರಂಥದ ಕಥಾಶೈಲಿಯಿಂದ. ಸಂಸ್ಕೃತ ಮೂಲದಿಂದ ಬಂದ ಈ ಶಬ್ದ ಕನ್ನಡದ ಹೆಗ್ಗಳಿಕೆ. (ಹಿಂದಿಯಲ್ಲಿ ಕಾದಂಬರಿಗಳಿಗೆ 'ಉಪನ್ಯಾಸ್', ಕಾದಂಬರಿಕಾರರಿಗೆ 'ಉಪನ್ಯಾಸಕಾರ್' ಎನ್ನುತ್ತಾರೆ). ಸಂಸ್ಕೃತಸಾಹಿತ್ಯ ವಾಙ್ಮಯದಲ್ಲಿ ಬಾಣಭಟ್ಟನ ಈ 'ಕಾದಂಬರೀ' ಗ್ರಂಥವನ್ನು ಕುರಿತು "ಕಾದಂಬರೀರಸಜ್ಞಾನಾಂ ಆಹಾರೋऽಪಿ ನ ರೋಚತೇ" ಎಂದು ಬಣ್ಣಿಸಲಾಗಿದೆ. ಈ ಮೆಚ್ಚುಗೆಯ ಮಾತಿನಲ್ಲಿ ದ್ವಂದ್ವಾರ್ಥವಿದೆ. ಇಲ್ಲಿ 'ಕಾದಂಬರೀ' ಶಬ್ದದ ಮೇಲೆ ಶ್ಲೇಷೆಯನ್ನು ಮಾಡಲಾಗಿದೆ. "ಕಾದಂಬರೀಗ್ರಂಥ ರಸಾಸ್ವಾದನೆ ಮಾಡಿದವರಿಗೆ ಯಾವ ಭಕ್ಷ್ಯಭೋಜ್ಯವೂ ರುಚಿಸುವುದಿಲ್ಲ" ಎಂದು ಒಂದು ಅರ್ಥ. "ಶಾಬ್ದಿಕವಾಗಿ ಕಾದಂಬರೀ ಎಂದರೆ ಕದಂಬ ಹೂವಿನಿಂದ ತಯಾರಾದ ಮದ್ಯ/ಮದಿರೆ. ಅದನ್ನು ಆಸ್ವಾದಿಸಿದವರಿಗೆ ಯಾವ ಭಕ್ಷ್ಯಭೋಜ್ಯವೂ ರುಚಿಸುವುದಿಲ್ಲ" ಎಂದು ಇನ್ನೊಂದು ಅರ್ಥ.

ಬಾಣಭಟ್ಟನ ಈ 'ಕಾದಂಬರೀ' ಗ್ರಂಥದ ಪೂರ್ವಭಾಗದಲ್ಲಿ 'ಶುಕನಾಸೋಪದೇಶಃ' ಎಂಬ ಕಥಾಪ್ರಸಂಗ ಬರುತ್ತದೆ. ಉಜ್ಜಯಿನಿಯ ಮಹಾರಾಜ ತಾರಾಪೀಡ ತನ್ನ ಮಗನಾದ ಚಂದ್ರಾಪೀಡನಿಗೆ ಯುವರಾಜ ಪಟ್ಟಾಭಿಷೇಕ ಮಾಡಲು ನಿರ್ಧರಿಸುತ್ತಾನೆ. ಯುವರಾಜ್ಯಾಭಿಷೇಕ ನಡೆಯಲು ಒಂದೆರಡು ದಿನವಿದ್ದಾಗ ಚಂದ್ರಾಪೀಡನು ಶುಕನಾಸ ಎಂಬ ಹಿರಿಯ ಮಂತ್ರಿಯ ಆಶೀರ್ವಾದ ಪಡೆಯಲು ಹೋಗುತ್ತಾನೆ. ರಾಜಕಾರಣದ ಹೊಣೆಗಾರಿಕೆಯನ್ನು ಹೊರಲಿದ್ದ ಚಂದ್ರಾಪೀಡನಿಗೆ ರಾಜತಂತ್ರದ ಬಗ್ಗೆ ಶುಕನಾಸ ನೀಡಿದ ಕೆಲವೊಂದು ಉಪದೇಶದ ಮಾತುಗಳ ಸಾರಾಂಶ ಹೀಗಿದೆ. ಈ ಹಿತೋಪದೇಶದ ಮಾತುಗಳನ್ನು ಯುವರಾಜ ಚಂದ್ರಾಪೀಡನಿಗೇ ಏಕೆ ಆಧುನಿಕ ಯುವರಾಜ/ಯುವರಾಣಿಯರಂತಿರುವ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಪಡೆದ ಪ್ರತಿಯೊಬ್ಬ ವಿದ್ಯಾವಂತ ಯುವಕ/ಯುವತಿಯರಿಗೂ ಮದುವೆಗೆ ಮುನ್ನ ಹೇಳಬೇಕೆನಿಸುತ್ತದೆ:

"ಮಗು, ಚಂದ್ರಾಪೀಡ! ಎಲ್ಲಾ ಶಾಸ್ತ್ರಗಳನ್ನೂ ಬಲ್ಲವನಾದ ನಿನಗೆ ಉಪದೇಶಮಾಡುವುದೇನಿದೆ? ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ, ಕೇಳು. ವಯಸ್ಸಿಗೆ ಸಹಜವಾಗಿ ಮೂಡಿಬರುವ ಯೌವನವೆಂಬ ಮದ ಒಂದು ದೊಡ್ಡ ಕತ್ತಲು. ಆ ಕಾರ್ಗತ್ತಲನ್ನು ಓಡಿಸಲು ದೀಪದ ಬೆಳಕಿನಿಂದಾಗಲೀ, ಮಾಣಿಕ್ಯದ ದೀಪ್ತಿಯಿಂದಾಗಲೀ, ಸೂರ್ಯನ ಪ್ರಭೆಯಿಂದಾಗಲೀ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ಬರುವ ಐಶ್ವರ್ಯದ ಮದ ಮತ್ತೊಂದು ಭೀಕರವಾದ ಕತ್ತಲು. ಅದು ನಿನ್ನ ಕಣ್ಣುಗಳನ್ನು ಕುರುಡಾಗಿಸುತ್ತದೆ. ಇನ್ನು ಅಹಂಕಾರವೆಂಬ ಜ್ವರ ಯಾವ ಶೈತ್ಯೋಪಚಾರಗಳಿಂದಲೂ ಉಪಶಮನವಾಗುವುದಿಲ್ಲ. ವಿಷಯವಾಸನೆ ಮತ್ತು ಮೋಹದಿಂದ ಉಂಟಾಗುವ ವಿಷವನ್ನು ಯಾವ ಗಿಡಮೂಲಿಕೆಗಳಿಂದಲೂ ನಿವಾರಣೆಮಾಡಲು ಆಗುವುದಿಲ್ಲ. ರಾಜ್ಯಸುಖವೆಂಬ ಅಮಲು ನೆತ್ತಿಗೇರಿದರೆ ಬೆಳಗಾದರೂ ನಿದ್ರೆಯಿಂದ ಎಚ್ಚರವಾಗುವುದಿಲ್ಲ. ಆಗರ್ಭಶ್ರೀಮಂತಿಕೆ, ಏರು ಜವ್ವನ, ಅಪ್ರತಿಮ ಸೌಂದರ್ಯ, ಅಪರಿಮಿತ ಅಧಿಕಾರ ಇವುಗಳಲ್ಲಿ ಒಂದೊಂದೂ ಮನುಷ್ಯನ ತಲೆಯನ್ನು ಕೆಡಿಸಿ ಅನರ್ಥಪರಂಪರೆಯನ್ನುಂಟುಮಾಡುತ್ತವೆ. ಇನ್ನು ಇವೆಲ್ಲವೂ ಒಂದೆಡೆ ಸೇರಿದವೆಂದರೆ ಮನುಷ್ಯನ ಕತೆ ಮುಗಿದೇ ಹೋಯಿತು. ಎಷ್ಟೇ ಓದಿ ಸುಶಿಕ್ಷಿತನೆನಿಸಿದ್ದರೂ ಯೌವನವು ಬುದ್ಧಿಯನ್ನು ಕಲುಷಿತಗೊಳಿಸುತ್ತದೆ. ಕಣ್ಣಿಗೆ ಮಂಕು ಕವಿಯುತ್ತದೆ. ರಾಜರಿಗೆ ಬುದ್ಧಿಯ ಮಾತುಗಳನ್ನು ಹೇಳುವವರು ಕಡಿಮೆ; ಹೊಗಳುವ ಭಟ್ಟಂಗಿಗಳೇ ಜಾಸ್ತಿ. ರಾಜರು ಮುಖಸ್ತುತಿ ಮಾಡುವವರ ಮಾತಿಗೆ ಮರುಳಾಗುತ್ತಾರೆ. ನಿಷ್ಠುರದ ಮಾತುಗಳಿಗೆ ಕಿವಿಗೊಡುವುದಿಲ್ಲ. ಸಂಪತ್ತು ಕಣ್ಣುಗಳನ್ನು ಕೋರೈಸುತ್ತದೆ. ಆದರೆ ಅದು ಮುಖಕ್ಕೆ ಮಸಿ ಬಳಿಯುತ್ತದೆ. ದೀಪದ ಜ್ವಾಲೆ ಎಷ್ಟೇ ಬೆಳಗಿದರೂ ಅದು ಸುತ್ತೆಲ್ಲ ಉಗುಳುವುದು ಕಪ್ಪಾದ ಹೊಗೆಯನ್ನೇ ತಾನೆ?"

ಹಿರಿಯ ವಯಸ್ಸಿನವರಾದ ನ್ಯಾ. ಹೆಗ್ಗಡೆಯವರು ಚಂದ್ರಾಪೀಡನಂತೆ ಯುವಕರಲ್ಲ. ಧನಕನಕ ಸಂಪತ್ತನ್ನು ಸಂಗ್ರಹಿಸಿಟ್ಟುಕೊಂಡ ಧನಿಕರಲ್ಲ. ಶ್ರೇಷ್ಠನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತರಾದ ಅವರಲ್ಲಿ ಅವಿವೇಕ ನೆಲೆಯೂರಲು ಸಾಧ್ಯವಿಲ್ಲ. ರಾಜೀನಾಮೆಯ ಮೂಲಕ ಲೋಕಾಯುಕ್ತ ಹುದ್ದೆಯನ್ನು ತ್ಯಜಿಸಲು ಮುಂದಾಗಿದ್ದ ಅವರಿಗೆ ಅಧಿಕಾರದ ಮೋಹವಿಲ್ಲ. ಹೀಗಾಗಿ ಈ ಸಂಸ್ಕೃತ ಸೂಕ್ತಿಯ ಪರಿಧಿಗೆ ಅವರ ಕಾರ್ಯವ್ಯಾಪ್ತಿ ಬರುವುದಿಲ್ಲ. ಆದರೆ ಒಂದು ಹಂತದಲ್ಲಿ ಅಧಿಕಾರವನ್ನು ತ್ಯಜಿಸಲು ಅವರು ತೆಗೆದುಕೊಂಡಿದ್ದ ನಿರ್ಧಾರವೇ ಸಮಾಜದಲ್ಲಿ ಅನರ್ಥಕ್ಕೆ ಎಡೆಮಾಡಿಕೊಡುತ್ತದೆಯೆಂಬ ಭೀತಿ ಸಾರ್ವಜನಿಕರಲ್ಲಿ ಮೂಡಿತ್ತು. "Power corrupts man" (ಅಧಿಕಾರ ಮನುಷ್ಯನನ್ನು ಭ್ರಷ್ಟನನ್ನಾಗಿಸುತ್ತದೆ). ಅದರ ಮುಂದುವರಿದ ಭಾಗ "Absolute power corrupts absolutely" (ಪರಮಾಧಿಕಾರ ಸಂಪೂರ್ಣವಾಗಿ ಭ್ರಷ್ಟನನ್ನಾಗಿಸುತ್ತದೆ). ಇದಕ್ಕೆ ಪೂರಕವಾಗಿ "Power attracts corruptible" (ಅಧಿಕಾರ ಭ್ರಷ್ಟರನ್ನು ಆಕರ್ಷಿಸುತ್ತದೆ) ಎನ್ನುವ ಮಾತೂ ಇದೆ. ಅಧಿಕಾರವನ್ನು ಕುರಿತು ಅನುಭವಿಗಳು ಆಡಿದ ಈ ಯಾವ ಮಾತೂ ಅಧಿಕಾರಮೋಹವಿಲ್ಲದ ನ್ಯಾ. ಹೆಗಡೆಯವರಿಗೆ ಅನ್ವಯಿಸುವುದಿಲ್ಲ. ಆದರೆ ದೀಪದ ಬುಡದಲ್ಲಿಯೇ ಕತ್ತಲು ಎಂಬಂತೆ ಭ್ರಷ್ಟಾಚಾರವನ್ನು ತನಿಖೆಮಾಡುವ ಕೆಲ ಸಿಬ್ಬಂದಿಯ ಮೇಲೆಯೂ ಭ್ರಷ್ಟಾಚಾರದ ಆರೋಪಗಳಿವೆ. ಲೋಕಾಯುಕ್ತರಿಗೆ ಪರಮಾಧಿಕಾರವನ್ನು

ನೀಡಬೇಕೆಂಬ ಕೂಗು ಕೇಳಿಬರುತ್ತಿದೆ. ಅಂತಹ ಅಧಿಕಾರಕ್ಕಾಗಿ ನ್ಯಾ. ಹೆಗಡೆಯವರು ರಾಜೀನಾಮೆ ನೀಡಿದ್ದರು ಎಂದು ಬಿಂಬಿಸುವುದು ಸಮಂಜಸವಾಗಲಾರದು. ಪ್ರಜಾಪ್ರಭುತ್ವದಲ್ಲಿ ಯಾರೊಬ್ಬರಿಗೂ ಪರಮಾಧಿಕಾರ ನೀಡುವುದು ಸಾಧ್ಯವಿಲ್ಲ, ಸಾಧುವೂ ಅಲ್ಲ. ಹಾಗೆ ನೀಡಿದರೆ ಅದು ಪ್ರಜಾಪ್ರಭುತ್ವ ಎನಿಸುವುದೇ ಇಲ್ಲ ಎಂಬುದು ನ್ಯಾಯಮೂರ್ತಿಗಳಿಗೆ ಚೆನ್ನಾಗಿ ಗೊತ್ತು. ಅವರು ಬಯಸುತ್ತಿರುವುದು ಪರಮಾಧಿಕಾರವನ್ನಲ್ಲ. ತಮ್ಮ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಬೇಕಾದ ಹೆಚ್ಚಿನ ಅಧಿಕಾರ. ಅವರ ತಂದೆ ಕೆ.ಎಸ್. ಹೆಗ್ಗಡೆಯವರು ಆಗಿನ ಪ್ರಧಾನಿ ಇಂದಿರಾಗಾಂಧಿಯವರ ಕಾಲದಲ್ಲಿದ್ದ (ಅ)ವ್ಯವಸ್ಥೆಯ ವಿರುದ್ಧ ಬಂಡೆದ್ದು ರಾಜೀನಾಮೆ ಕೊಟ್ಟಂತೆ ಲೋಕಾಯುಕ್ತ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಹೆಗ್ಗಳಿಕೆಗೆ ಪಾತ್ರರಾದರು. ತಂದೆಯಂತೆ ಮಗ. ರಾಜೀನಾಮೆ ವಾಪಾಸು ತೆಗೆದುಕೊಳ್ಳುವಂತೆ ಒತ್ತಾಯಿಸುವುದಿಲ್ಲವೆಂದಿದ್ದ ಮುಖ್ಯಮಂತ್ರಿ ಯಡಿಯೂರಪ್ಪನವರು ಮತ್ತಿತರ ರಾಜಕೀಯ ಪ್ರಮುಖರು ಖುದ್ದಾಗಿ ಅವರ ಮನೆಗೆ ಹೋಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಯಾವ ಒತ್ತಡಕ್ಕೂ ಮಣಿಯುವುದಿಲ್ಲವೆಂದಿದ್ದ ನ್ಯಾ. ಹೆಗ್ಗಡೆಯವರು ಹಠಾತ್ತನೆ ತಮ್ಮ ನಿರ್ಧಾರವನ್ನು ಬದಲಿಸಿದ್ದು ಅನೇಕರಿಗೆ ವಿಸ್ಮಯವನ್ನುಂಟುಮಾಡಿದೆ. ಇದಕ್ಕೆ ರಾಜಕೀಯ ಬಣ್ಣವನ್ನು ಕೆಲವರು ಬಳಿಯುತ್ತಿದ್ದಾರೆ. ಪರಂಪರಾಗತವಾಗಿ ಹೇಳುತ್ತಾ ಬಂದಿರುವ ನುಡಿಗಟ್ಟಾದ 'ಕೆಸರಿನಲ್ಲಿರುವ ಕಮಲ ಕೆಸರನ್ನು ಅಂಟಿಸಿಕೊಳ್ಳದೆ ಕಮಲವಾಗಿಯೇ ಉಳಿಯುತ್ತದೆ' ಎಂದರೆ ಅದಕ್ಕೂ ರಾಜಕೀಯ ಲೇಪನ ಮಾಡುವ ಸಾಧ್ಯತೆಗಳಿವೆ. ಇದೆಲ್ಲವನ್ನೂ ಮೆಟ್ಟಿ ನಿಂತು ಕಾರ್ಯ ನಿರ್ವಹಿಸುವ ಜವಾಬ್ದಾರಿ ನ್ಯಾ. ಹೆಗ್ಗಡೆಯವರ ಮೇಲಿದೆ. ಹೆಚ್ಚಿನ ಅಧಿಕಾರವನ್ನು ನೀಡುವ ಭರವಸೆಯನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದರೆ ಅದು ಈಡೇರುವುದು ಯಾವಾಗ ಎಂಬುದು ಮಾತ್ರ ಯಕ್ಷಪ್ರಶ್ನೆಯಾಗಿದೆ. ಇದು ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ತಂತ್ರಗಾರಿಕೆಯೇ ಅಥವಾ ಭ್ರಷ್ಟಾಚಾರದ ವಿರುದ್ಧ ಗದಾಪ್ರಹಾರ ಮಾಡಲು ಲೋಕಾಯುಕ್ತರ ಕೈಗಳನ್ನು ನಿಜವಾಗಿಯೂ ಬಲಪಡಿಸಲಾಗುವುದೇ ಎಂಬುದನ್ನು ಕಾಲವೇ ನಿರ್ಧರಿಸಬೇಕಾಗಿದೆ. ಭ್ರಷ್ಟಾಚಾರದ ಕಬಂಧ ಬಾಹುಗಳು ಇಡೀ ನಾಡನ್ನೇ ಆವರಿಸಿಕೊಂಡಿವೆ. ಅದರ ವಿರುದ್ಧ ಹೋರಾಟ ನಡೆಸುವವರಿಗೆ ಎಂಟೆದೆಯೇ ಬೇಕು. ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಗಡೆಯವರ ಹೋರಾಟವನ್ನು ನೋಡಿದಾಗ ನಾಡಿನ ಪ್ರಖ್ಯಾತ ಕವಿಗಳಾದ ಎಚ್.ಎಸ್. ವೆಂಕಟೇಶ ಮೂರ್ತಿಯವರು ಕಿರುತೆರೆಯ ಖ್ಯಾತನಿರ್ದೇಶಕ ಟಿ.ಎನ್. ಸೀತಾರಾಮ್ ಅವರ 'ಮುಕ್ತ ಮುಕ್ತ' ಧಾರಾವಾಹಿಗೆ ಬರೆದ ಈ ಕೆಳಗಿನ ಶೀರ್ಷಿಕೆಗೀತೆ ಅನ್ವರ್ಥಕವಾಗಿರುವಂತೆ ತೋರುತ್ತದೆ:

**ತನ್ನಾವರಣವೆ ಸೆರೆಮನೆಯಾದರೆ**
**ಜೀವಕೆ ಎಲ್ಲಿಯ ಮುಕ್ತಿ**
**ಬೆಳಕಿನ ಬಟ್ಟೆಯ ಬಿಚ್ಚುವ ಜ್ಯೋತಿಗೆ**
**ಬಯಲೇ ಜೀವನ್ಮುಕ್ತಿ!**

**ಹೂಮೊಗವಾಡದ ಇರಿಯುವ ಮುಳ್ಳೆ**
**ಎಲ್ಲಿಯವರೆಗೆ ನಿನ್ನಾಟ !**
**ಬೆಳಕಿನ ಕೂಸಿಗೆ ಕೆಂಡದ ಹಾಸಿಗೆ**
**ಕಲಿಸಿದೆ ಜೀವನ ಪಾಠ!**

**ಇರುಳ ವಿರುದ್ಧ ಬೆಳಕಿನ ಯುದ್ಧ**
**ಕೊನೆಯಿಲ್ಲದ ಕಾದಾಟ !**
**ತಡೆಯೇ ಇಲ್ಲದೆ ನಡೆಯಲೆ ಬೇಕು**
**ಸೋಲಿಲ್ಲದ ಹೋರಾಟ !**

**7.7.2010**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑